1	2	3
57.	ಡೈರಿ ಟೆಕ್ನೀಷಿಯನ್ ದರ್ಜೆ-2	10
58.	ಡೈರಿ ಟೆಕ್ನೀಷಿಯನ್ ದರ್ಜೆ-4	32
59.	ಡೈರಿ ಆಪರೇಟರ್ ದರ್ಜೆ-2	01
60.	ಡೈರಿ ಆಪರೇಟರ್ ದರ್ಜೆ-4	74
61.	ಡೈರಿ ವರ್ಕರ್ ದರ್ಜೆ-4	27
62.	ಸಹಾಯಕ	41
	ಒಟ್ಟು	**401**

ಕೆ.ಆರ್. ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಹನಸೋಗ್ ಗ್ರಾಮಕ್ಕೆ ರಸ್ತೆ ನಿರ್ಮಾಣ

1025 (1175) ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್. ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಹನಸೋಗೆ ಗ್ರಾಮದ ಮಧ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯಲ್ಲಿ ವಾಹನ ಓಡಾಟ ಜಾಸ್ತಿಯಾಗಿದ್ದು ಈ ಗ್ರಾಮಕ್ಕೆ ಬದಲಿ ರಸ್ತೆ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಸದರಿ ಯೋಜನೆಗೆ ನಿಗದಿಪಡಿಸಿರುವ ಹಣ ಎಷ್ಟು; ಕೆಲಸ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹೌದು, ಕೆ.ಆರ್.ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಹನಸೋಗ್ ಗ್ರಾಮದ ಮಧ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯಲ್ಲಿ ವಾಹನ ಓಡಾಟ ಜಾಸ್ತಿಯಾಗಿದ್ದು, ಈ ಗ್ರಾಮಕ್ಕೆ ಬದಲೀ ರಸ್ತೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಆ) ಇಲ್ಲಿಯವರೆಗೆ ಹಣ ನಿಗಧಿಪಡಿಸಿರುವುದಿಲ್ಲ. ಅನುದಾನದ ಲಭ್ಯತೆಯ ಮೇರೆಗೆ ಸದರಿ ಯೋಜನೆಯನ್ನು ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

ಹುಣಸೂರು ಉಪ ಅರಣ್ಯ ಸಂರಕ್ಷಣಾ ಕಛೇರಿಯಲ್ಲಿ ಹರಾಜು ಮಾಡಿರುವ ಮರಗಳು

1026 (1178) ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಗೆ ಸೇರಿದ ಹುಣಸೂರು ಕಛೇರಿಯಲ್ಲಿ ಕಳೆದ 3 ವರ್ಷಗಳಿಂದ ಹರಾಜು ಮಾಡಲಾಗಿರುವ ಮರಗಳ ಸಂಖ್ಯೆ ಎಷ್ಟು?

ಆ) ಇದರಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು? ಹರಾಜಿನಲ್ಲಿ ಅಳವಡಿಸಲಾಗಿರುವ ನಿಬಂಧನೆಗಳೇನು?

ಇ) ಹರಾಜಿನಲ್ಲಿ ನಿಯಮಬಾಹಿತವಾಗಿ ಮರಗಳನ್ನು ಹರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ)

ಕ್ರಮ ಸಂಖ್ಯೆ	ವಿವರಗಳು	1997-98 (ಘ.ಮಿ)	1998-99 (ಘ.ಮಿ)	1999-2000 (ಘ.ಮಿ)
1.	ನಾಟಾಗಳು	712.797	9.596	183.01
2.	ನೌದೆ	573.017	179.583	56.27
3.	ಸರಗಳು	4903 ಸಂ	1143 ಸಂ	3951 ಸಂ
4.	ಬೊಂಬು	5024 ಸಂ	38500 ಸಂ	-

ಆ) ಮೇಲ್ಕಂಡ ಅರಣ್ಯ ಉತ್ಪನ್ನಗಳ ಮಾರಾಟದಿಂದ ಈ ಕೆಳಕಂಡಂತೆ ಆದಾಯ ಬಂದಿರುತ್ತದೆ.

1997-98 (ಆದಾಯ ರೂ. ಲಕ್ಷಗಳಲ್ಲಿ)	1998-99 (ಆದಾಯ ರೂ. ಲಕ್ಷಗಳಲ್ಲಿ)	1999-2000 (ಆದಾಯ ರೂ. ಲಕ್ಷಗಳಲ್ಲಿ)
125.143	40.125	23.689

ಹರಾಜನ್ನು ಅರಣ್ಯ ಸಂಹಿತೆಯಲ್ಲಿ ಇರುವ ಷರತ್ತು ನಿಬಂಧನೆಗಳ ಪ್ರಕಾರ ಮಾಡಲಾಗಿದೆ.

ಇ) ಇಲ್ಲ

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಕೆ.ಆರ್.ನಗರ ತಾಲ್ಲೂಕು ಹನಸೋಗೆ ಗ್ರಾಮದ ಪಳ್ಳದಲ್ಲಿ ನಿರ್ಮಿಸಿರುವ ಸೇತುವೆ